ಹರೇ ಶ್ರೀನಿವಾಸ,

ಒಮ್ಮೆ ಹಿರಿಯ ಬಾಜಿರಾಯ ಪೇಶ್ವೆ ಬದಾಮಿಗೆ ಬಂದಾಗ ಶ್ರೀ ಪ್ರಸನ್ನವೆಂಕಟದಾಸರನ್ನು ಕಾಣಲಿಚ್ಛಿಸಿ ತನ್ನ ಕರಣಿಕನಿಗೆ ಅವರನ್ನು ಸಕಲ ಮರ್ಯಾದೆಯೊಂದಿಗೆ ಕರೆತರಲು ಕಳುಹಿಸಿದನಂತೆ. ಅಂತೆಯೇ ಕರಣಿಕನು ದಾಸರ ಬಳಿ ಬಂದು ರಾಜಾಜ್ಞೆಯನ್ನು ತಿಳಿಸುವಾಗ, ದಾಸರು ಅವನ ಕಿವಿಯಹಿಂಭಾಗದಲ್ಲಿ ಬಂಗಾರದ ಲೆಕ್ಕಣಿಕೆಯನ್ನು ನೋಡಿ ವಿಚಾರಿಸಲು ತಾನು ಪೇಶ್ವೆ ರಾಜ್ಯದ ಅತಿ ಶೀಘ್ರಲಿಪಿಕಾರನೆಂತಲೂ, ಆ ಬಂಗಾರದ ಲೆಕ್ಕಣಿಕೆ ಪೇಶ್ವೆಯವರು ಮೆಚ್ಚಿಕೊಟ್ಟ ಅಪರೂಪದ ಕಾಣಿಕೆಯೆಂದು ಹೇಳಲು,

ದಾಸರು " ಓಹೊ, ಹಾಗಾದರೆ ನೀವು ಅಧುನಿಕ ಗಣಪತಿಯೇ ಸರಿ. ನಾನು ಒಂದು ಪದ್ಯವನ್ನು ಹೇಳುತ್ತೇನೆ, ನಾನು ಅದನ್ನು ಹೇಳುತ್ತಿರುವಂತೆಯೇ ನೀವು ಅದನ್ನು ಬರೆದು ತೋರುವಿರಾದರೆ ನಾನು ನೀವು ಹೇಳುವದನ್ನು ಒಪ್ಪುತ್ತೇನೆ ಸೈಯೇ ?" ಎಂದು"
_ಎಂಥ ಶ್ರೀಮಂತನಂತಾನೋ, ಶ್ರೀಕಾಂತೆಯ ಕಾಂತ" ಪದ್ಯವನ್ನು ಹೇಳಲು. ಕರಣಿಕನು ಆ ಪದ್ಯದ ಪಲ್ಲವಿ, ಅನು ಪಲ್ಲವಿಯನ್ನು ಅರ್ಥ ಮಾಡಿಕೊಳ್ಳುವದರಲ್ಲಿಯೇ ಸುಸ್ತೋ ಸುಸ್ತಾಗಿ ತನ್ನ ಬಂಗಾರದ ಲೆಕ್ಕಣಿಕೆಯನ್ನು ಕೆಳಗಿಟ್ಟು ಶರಣಾಗತನಾದನು

ಶ್ರೀಪ್ರಸನ್ನೆವ್ವೆಂಕಟದಾಸರ ಅಪೂರ್ವ ಕೃತಿಯನ್ನು ಅರ್ಥಸಹಿತವಾಗಿ ನೋಡೋಣ:

ಎಂಥಾ ಶ್ರೀಮಂತನಂತನೋ ಶ್ರೀಕಾಂತೇಯ ಕಾಂತ ...॥ ಪ ॥

ಬೊಮ್ಮನು ಹೆಮ್ಮಗ ಮೊಮ್ಮಮೃಢಮ್ಮರಿಮೊಮ್ಮಗಶಣ್ಮಶಿರಮ್ಮ
ಪರಮ್ಮ ಅಮ್ಮರಸಮ್ಮೋಹ ನಿಮ್ಮಣುಗಮ್ಮರು ನಮ್ಮೊ ನಮ್ಮ ಪರಮ್ಮ ಮಹಿಮ್ಮ ।೧ ।

ಅಂಗ(ಂಬು)ರುಹಂಗಳ ಅಂಗನಂತಗತ(ಡ) ಮಂಗಳಪಾಂಗ ವಿಶ್ವಂಗಳ
ಮಂಗಳಸಿಂಗರದಂಗುಟ ಸಂಗದ ಗಂಗಜ ಕಂಗಳಹಂಗಳ ಹಿಂಗಿಪಳಾಂಗಾ

ಪನ್ನಗಪನ್ನ ಶಯನ್ನ ಮಹೋನ್ನತ ಪನ್ನಗವರವಾಹನ್ನ ರತುನ್ನ ಭವಾರ್ಣ
ಸುಖೋನ್ನತ ರನ್ನಗ ರನ್ನಿಜ ನಿನ್ನೆದುರಿನ್ನ್ಯಾರೆನ್ನೊಡೆಯನ್ನೆ

ಬಲ್ಲ ಕೈವಲ್ಯಜ್ಞರೊಲ್ಲಭ ಸುಲ್ಲಭ ಬಲ್ಲಿದ ಖುಲ್ಲರದಲ್ಲಣನಲ್ಲದೆ
ಹುಲ್ಲುಅದು ನಿನ್ನೊಳವಲ್ಲ ನಿನ್ನಲ್ಲದೆ ಸಲ್ಲದು ಸೊಲ್ಲ ನೀನಲ್ಲದೆ ನಿಲ್ಲಾ ....॥ ೪ ॥

ಅಂಬರದುಂಬಿಗೆ ತುಂಬೆವಿಶ್ವಂಬಸುರದಿಂಬಿಲಿನಿಂಬಿಟ್ಟುಕೊಂಬಕೃಪಾಂಬುಧೆ

ಇಂಬಕದಂಬಕಬಿಂಬ ಪ್ರಸನ್ವೇಂಕಟನಂಬಿದ ಬಿಂಬನಿವನೆಂಬ ಕುಟುಂಬಿ.....॥ ೫ ॥

ಸ್ಥೂಲಾರ್ಥ :

ಎಂಥಾ ಶ್ರೀಮಂತನಂತನೋ ಶ್ರೀಕಾಂತೇಯ ಕಾಂತ ...॥ ಪ ॥

ಶ್ರೀಹರಿಯು ಎಂಥಾ ಮಹಿಮೆಯುಳ್ಳವನೆಂದು ದಾಸರು ವರ್ಣಿಸಲಾರಂಭಿಸುತ್ತಾರೆ ಎಂಥಾ ಶ್ರೀಮಂತನು, ಅನಂತನಾದ ಶ್ರೀರಮಾ ರಮಣನು.

ಬೊಮ್ಮನು ಹೆಮ್ಮಗ ಮೊಮ್ಮಮೃಢಮ್ಮರಿಮೊಮ್ಮಗಶಣ್ಮಶಿರಮ್ಮ
ಪರಮ್ಮ ಅಮ್ಮರಸಮ್ಮೋಹ ನಿಮ್ಮಣುಗಮ್ಮರು ನಮ್ಮೊ ನಮ್ಮ ಪರಮ್ಮ ಮಹಿಮ್ಮ ।೧ ।

ಅರ್ಥ : ಬೊಮ್ಮನು ಹೆಮ್ಮಗ = ಚತುರ್ಮುಖ ಬ್ರಹ್ಮನು ಹಿರಿಯಮಗ, ಸೃಷ್ಟಿಯಾದಿಯಲ್ಲಿ ಪರಮಾತ್ಮನ ಕಮಲನಾಭದಿಂದ ಹೊರಹೊಮ್ಮಿದ ಚೊಚ್ಚಿಲ ಮಗ ಹಿರಿಯಚೇತನರಲ್ಲಿ ಹಿರಿಯನಾದ ಬ್ರಹ್ಮ.

ಮೊಮ್ಮ ಮೃಢ = ಚತುರ್ಮುಖನ ಮಗನಾಗಿ ರುದ್ರನ ಹುಟ್ಟು, ಅದಕ್ಕೆ ರುದ್ರನ ಅಜ್ಜ ಹರಿ, ರುದ್ರ ಹರಿಗೆ ಮೊಮ್ಮಗ

ಮರಿಮೊಮ್ಮಗಶಣ್ಮಶಿರ = ರುದ್ರನ ಮಗನಾದ ಷಣ್ಮುಖ(ಷಟ್ + ಶಿರ) ಮೊಮ್ಮಗನ ಮಗ = ಮರಿಮೊಮ್ಮಗ.

ಪರಮ್ಮ = ಪರಮ= ಉತ್ಕೃಷ್ಟನಾದವ, ಅಮ್ಮರಸಮ್ಮೋಹ = ಅಮರ ಸಮೂಹ ಶಬ್ದ ಆಡು ಭಾಷೆಗನುಗುಣವಾಗಿ ದಾಸರು ಅಮ್ಮರಸಮ್ಮೋಹ ಎಂಬ ತದ್ಭವರೂಪದ ಛಾಯೆಯಲ್ಲಿ ಹೇಳಿದ್ದಾರೆ.

ನಿಮ್ಮಣುಗಮ್ಮರು = ಈ ಅಮರ ಸಮೂಹವು ನಿನ್ನ ಅಣುಗರು = ನಿನ್ನ ಸೇವಕರು, ಅಮ್ಮರು = ಎನ್ನುವರು(ಅಂಬೋರು = ಅಂಬರು= ಅಮ್ಮರು)

ಅಂಥವನಾದ ನಿನಗೆ ..ನಮ್ಮೊ ನಮ್ಮ ಪರಮ್ಮ ಮಹಮ್ಮ = ನಮೋ ನಮ್ಮೆಲ್ಲರ ಪರಮ ಮಹಿಮನಾದವನೆ.

ಅಂಬುರುಹಂಗಳ ಅಂಗನಂತಗತ ಮಂಗಳಪಾಂಗ ವಿಶ್ವಂಗಳ
ಮಂಗಳಸಿಂಗರದಂಗುಟ ಸಂಗದ ಗಂಗಜ ಕಂಗಳಘ(ಇಹ)ಂಗಳ ಹಿಂಗಿಪಳಾಂಗಾ ......॥೨ ॥

ಅರ್ಥ : ಅಂಬು+ರುಹ = ನೀರಿನಲ್ಲಿರುವ ಗಿಡ= ಕಮಲ ಅಂಗ = ಶರೀರ =ಕಮಲದಲ್ಲಿ ಬಂದಂಥಾ ಶರೀರ =ಬ್ರಹ್ಮ, ಅಂಗ = ದೇಹ..ಒಟ್ಟಾರೆ ಬ್ರಹ್ಮಾಂಡ
ಅನಂತಗತ = ಇಂತಹ ಬ್ರಹ್ಮಾಂಡಗಳು ಅನಂತಗತ, ಅಸಂಖ್ಯಾಕವಾಗಿರುವ ಬ್ರಹ್ಮಾಂಡಕ್ಕೆ ಮಂಗಳಾಂಗ = ಮಂಗಳ ಸ್ವರೂಪಿಯಾದ ಹರಿ.
ವಿಶ್ವಂಗಳ ಮಂಗಳ = ಸೃಷ್ಟಿಸಿದ ವಿಶ್ವಕ್ಕೆ ಮಂಗಳವನ್ನೀಯಲೋಸುಗ, ಸಿಂಗರದುಂಗುಟ = ಶೃಂಗಾರವಾದ ಅಂಗುಟ = ಉಂಗುಟ, ಶ್ರೀಹರಿಯ ಪಾದದ ಅಂಗುಟಾಗ್ರವು ಶ್ರೀಹರಿಯ ಸ್ವರೂಪವೆ ಆಗಿದೆ. ಅದರ ಸಂಗದ = ಸ್ಪರ್ಶದಿಂದ , ಗಂಗಜ = ಗಂಗಾ ನದಿಯು ಹುಟ್ಟಿತು.

ಕಂಗಳಘಂಗಳ = ಗಂಗೆಯ ದೃಷ್ಟಿಯು ಇಹದಲ್ಲಿ ಭಕ್ತರ ಅಘ ಹಿಂಗಿಸುವಳಾಗಿರುವಳು.

(ಇನ್ನೊಂದು ರೀತಿಯಲ್ಲಿ ಇರುವ "ಅಂಗರುಹಂಗಳ ಅಂಗನಂತಗಡ" ಎಂದು ತೆಗೆದುಕೊಂಡಾಗ ಅಂಗ + ರುಹಂಗಳ ಅಂಗ+ಅನಂತ ಗಡ!.. = ದೇಹ ಭಾಗಕ್ಕೆ ಅಂಗ ಅಂತಲೂ ರುಹಂಗಳ ಅನಂತ ಎಂದಾಗ, ಪರಮಾತ್ಮನ ದೇಹ ಬೇರೆಯಲ್ಲ ಅವನ ಭಾಗವಾದ ಕೈ, ಕಾಲು ಕಣ್ಣು ಬೇರೆಯವಲ್ಲ, ಸ್ವಗತಭೇದ ವಿವರ್ಜಿತನಾದವ ಅಂತ ಅರ್ಥ ತೆಗೆದುಕೊಳ್ಳಬಹುದು....)

ಪನ್ನಗಪನ್ನ ಶಯನ್ನ ಮಹೋನ್ನತ ಪನ್ನಗವರವಾಹನ್ನ ರತುನ್ನ ಭವಾರ್ಣ
ಸುಖೋನ್ನತ ರನ್ನಗ ರನ್ನಿಜ ನಿನ್ನೆದುರಿನ್ನ್ಯಾರೆನ್ನೊಡೆಯನ್ನೆ.......॥ ೩ ॥

ಅರ್ಥ:
ಪನ್ನಗಪನ್ನಶಯನ್ನ = ಸರ್ಪವನ್ನು ಹಾಸಿಗೆಮಾಡಿಕೊಂಡವ, ಮಹೋನ್ನತ ಪನ್ನಗವರವಾಹನ್ = ಮಹತ್ತರವಾದ ಪನ್ನಗವರ = ಸರ್ಪಕ್ಕಿಂತ ಶ್ರೇಷ್ಠನಾದ ಗರುಡವಾಹನ್ನ, ರತುನ್ನ = ಗುಣಗಳ ರಾಶಿ, ರತ್ನ, ಭವಾರ್ಣಸುಖೋನ್ನತ = ಭವವೆಂಬ ಸಾಗರಕ್ಕೆ ಉನ್ನತವಾದ ಸುಖವೀವ, ರನ್ನಗ ರನ್ನಿಜ = ವಿಶೇಷ ರತ್ನ = ಕಾಂತಿಯನ್ನು ಕೊಡುವವ ರನ್ನಗ, ಅಂಧಕಾರಕಳೆಯುವ ಕಾಂತಿನೀಡುವವ ರನ್ನಿಜ ಇಂಥಾ ನೀನಿರುವಾಗ ಇನ್ನ್ಯಾರು ಒಡೆಯನಾಗಲು ಸಾಧ್ಯ.

ಬಲ್ಲ ಕೈವಲ್ಯಜ್ಞರನೊಲ್ಲಭ ಸುಲ್ಲಭ ಬಲ್ಲಿದ ಖುಲ್ಲರದಲ್ಲಣನಲ್ಲದೆ
ಹುಲ್ಲದೆ ನಿನ್ನೊಳವಲ್ಲ ನಿನ್ನಲ್ಲದೆ ಸಲ್ಲದು ಸೊಲ್ಲ ನೀನಲ್ಲದೆ ನಿಲ್ಲಾ ....॥ ೩ ॥

ಅರ್ಥ : ಬಲ್ಲ ಕೈವಲ್ಯಜ್ಞರ ವಲ್ಲಭ = ಜ್ಞಾನಿಗಳ, ಮೋಕ್ಷಕ್ಕೆ ಅರ್ಹರಾದವರ ವಲ್ಲಭ, ದೊರೆಯಾದ ಹರಿ,
ಸುಲ್ಲಭ = ಹರಿಯು ಅರಿತವರಿಗೆ ಸುಲಭ
ಬಲ್ಲಿದ ಖುಲ್ಲರ ದಲ್ಲಣನಲ್ಲದೆ = ಬಲ್ಲಿದ= ಬಲಿಷ್ಠ ಹರಿಯು,

ಖುಲ್ಲರ = ದೈತ್ಯರ(ತನ್ಮೂಲಕ ಸಾಧನೆಗೆ ಶತ್ರುಗಳಾದ ಅರಿಷಡ್ವರ್ಗಗಳನ್ನೂ ಕೂಡ) ಎದೆಯನ್ನು ದಲ್ಲಣ = ನಡುಗಿಸುವ ಸಾಹಸಿ, ಒಬ್ಬನೆ ಧೈರ್ಯವಂತ ಜಗದಲಿ.

ಹುಲ್ಲದು ನಿನ್ನೊಳವಲ್ಲ ನಿನ್ನಲ್ಲದೆ = ಆ ಧೈರ್ಯವು ಹರಿಗಲ್ಲದೆ, ಹುಲು ಜೀವರಿಗೆ ಆಗುತ್ತದೆಯೊ?

ಸಲ್ಲದು ಸೊಲ್ಲ ನೀನಲ್ಲದೆ ನಿಲ್ಲಾ = ಬೇರೆಯ ಕಥೆಯು ನಿನ್ನ ಮುಂದೆ ನಿಲ್ಲುವದಿಲ್ಲ, ನೀನಲ್ಲದೆ ಯಾವುದು ನಡೆಯದು.ತೇನ ವಿನಾ....

ಅಂಬರದುಂಬಿಗೆ ತುಂಬೆವಿಶ್ವಂಬಸುರದಿಂಬಿಲಿನಿಂಬಿಟ್ಟುಕೊಂಬಕೃಪಾಂಬುಧೆ
ಇಂಬಕದಂಬಕಬಿಂಬ ಪ್ರಸನ್ವೇಂಕಟನಂಬಿದ ಬಿಂಬನಿವನೆಂಬ ಕುಟುಂಬಿ.....॥ ೪ ॥

ಅರ್ಥ :

ಪ್ರಳಯಕಾಲದಲ್ಲಿನ ಹರಿ ಮಹಿಮೆಯನ್ನು ಇಲ್ಲಿ ಹೇಳಿದ್ದಾರೆ ಅಂಬರದುಂಬಿಗೆತುಂಬೆ = ಇಡೀ ವಿಶ್ವವು (ಅಂಬರವನ್ನು ವಿಶ್ವಕ್ಕೆ ಹೋಲಿಸಿ) ತುಂಬಿತುಂಬೆ = ಪ್ರಳಯಜಲಧಿಯಲ್ಲಿ ತುಂಬಿ ತುಳುಕಾಡಿದಾಗ, ವಿಶ್ವಮ್ =ಈ ಬ್ರಹ್ಮಾಂಡವನ್ನು ಬಸುರದಿ = ಹರಿಯು ಗರ್ಭದಲ್ಲಿ, ಇಂಬಿಟ್ಟುಕೊಂಬ ಕೃಪಾನಿಧೇ = ಆಶ್ರಯ(ಇಂಬು), ಬ್ರಹ್ಮಾಂಡಕ್ಕೆ ಆಶ್ರಯವನ್ನು, ಗರ್ಭದಲ್ಲಿ ಹುದುಗಿಸಿಕೊಳ್ಳುವನು, ಇಂಥಹ ವ್ಯಾಪಾರವು ಅತ್ಯಂತ್ ದಯಾಳುವಾದವನಿಗೆ ಉಂಟು, ಕೃಪಾ ಸಾಗರನಾದ ಹರಿಯೆ ಆತನು.

ಇಂಬಕದಂಬಕ = ಇಂಬ=ಆಶ್ರಯ, ಕದಂಬಕ = ಸಮೂಹ, ಸಕಲ ಜೀವ ಸಮೂಹಕ್ಕ ಆಶ್ರಯನಾಗಿ ಅಲ್ಲದೆ ಬಿಂಬನಾಗಿ ಇರುವವ....
ಬಿಂಬ ಪ್ರಸನ್ವೇಂಕಟ = ಬಿಂಬ ಸ್ವರೂಪಿಯಾಗಿರುವ ದಾಸರ ಬಿಂಬರೂಪಿಯೂ ಆದ ಪ್ರಸನ್ವೇಂಕಟನು, ನಂಬಿದ ಬಿಂಬನಿವನೆಂಬ = ಶ್ರದ್ಧೆಯಿಂದ ನಂಬಿದವರಿಗೆ ಬಿಂಬನಂತೆ= ಅತ್ಯಂತ ಸಮೀಪದಲ್ಲಿರುವ ಎಂಬ ವಿಚಾರವನ್ನು ಮನಗಾಣಿಸಿ ವಿಶ್ವ ಕುಟುಂಬಿಯಂಬ ಪಾತ್ರವನ್ನು ಆಪ್ತರಿಗೆ ಪರಿಚಯಿಸಿಕೊಡುವನು. ಅಪರೋಕ್ಷಜ್ಞಾನವನ್ನಿತ್ತು ರಕ್ಷಿಸುವನು ಎಂಬ ತಾತ್ಪರ್ಯ.

____________Shanmukh K Patil_______________________